**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.</u>**

**<u>ಸಿಸಿ ನಂಃ /49/2022</u>**

| | | |
|---|---|---|
| ಹೆಸರು | ಪ್ರಜ್ವಲ್ | ಸಿ.ಡಬ್ಲ್ಯೂ 3 |
| ತಂದೆಯ ಹೆಸರು | ಮಹೇಶ್ | ಪಿ.ಡಬ್ಲ್ಯೂ 1 |
| ವಯಸ್ಸು | 25 ವರ್ಷ | |
| ಉದ್ಯೋಗ | ಟೆಕಾನಿಕಲ್ ಮೇನೇಜರ್ | |
| ವಾಸ ಸ್ಥಳ | ಬೆಂಗಳೂರು | |

ಸಾಕ್ಷಿಗೆ ದಿನಾಂಕಃ 25.02.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ ಃ</u>**

ಚಾ.ಸಾ. 1 , 2, 4 ರಿಂದ 13 ರವರ ಪರಿಚಯವಿರುವುದಿಲ್ಲ. ಸುಮಾರು 3 ವರುಷಗಳ ಹಿಂದೆ ನಾನು ಮತ್ತು 1ನೇ ಅರೋಪಿ ಊರಿನಿಂದ ಮಳವಳ್ಳಿಗೆ ಬೈಕಿನಲ್ಲಿ ಬರುತ್ತಿದ್ದಾಗ, ಹೆಚ್ಚು ಮಳೆ ಬರುತ್ತಿದ್ದು ಕತ್ತಲೆ ಇತ್ತು ಕನಕಪುರ ರಸ್ತೆಯಲ್ಲಿ ಸುಮಾರು ರಾತ್ರಿ 7.30 ರ ಅವದಿಯಲ್ಲಿ ಒಬ್ಬ ವ್ಯಕ್ತಿಯು ಏಕ ಏಕಿ ನಮ್ಮ ಬೈಕಿನ ಕಡೆ ನುಗ್ಗಿರುತ್ತಾರೆ, ಸದರಿ ಕಾಲಕ್ಕೆ 1ನೇ ಆರೋಪಿಯು ಚಾಲನೆ ಮಾಡುತ್ತಿದ್ದ ಬೈಕಿಗೆ ಏಕ ಏಕಿ ಬ್ರೇಕ್ ಹಾಕಿದ್ದು, ಆಗ ನಾನು ಮತ್ತು 1ನೇ ಅರೋಪಿಯು ಪಕ್ಕಕ್ಕೆ ಬಿದ್ದಿರುತ್ತೇವೆ ಮುಂದೆ ಏನಾಯಿತ್ತು ಎಂದು ನನಗೆ ಗೊತ್ತಿರುವುದಿಲ್ಲ, ಈ ಅಪಘಾತದಿಂದ ನನ್ನ ಮುಖಕ್ಕೆ ಪೆಟ್ಟಾಗಿರುತ್ತದೆ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**

**<u>ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ</u>**

1ನೇ ಅರೋಪಿಯು ತನ್ನ ಬೈಕನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ಒಬ್ಬ ಪಾದಚಾರಿಗೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ 2ನೇ

ಅರೋಪಿಯು ತನ್ನ ಕಾರನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಕೆಳಗಡೆ ಬಿದ್ದಿದ್ದ ವ್ಯಕ್ತಿಗೆ ಡಿಕ್ಕಿಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.ಇದರಿಂದ ಸದರಿ ಪಾದಚಾರಿಯು ಕಾರಿನ ಚಕ್ರಕ್ಕೆ ಸಿಕ್ಕಿಕೊಂಡಿದ್ದು ನಂತರ ಸಾರ್ವಜನಿಕರು ಸದರಿ ಗಾಯಾಳುವನ್ನು ಕಾರಿನ ಚಕ್ರದಿಂದ ಬಿಡಿಸಿದ್ದು, ಈ ಅಪಘಾತದಿಂದ ಸದರಿ ಪಾದಚಾರಿಯ ತಲೆ, ಎದೆ ಮತ್ತು ಇತರೆ ಭಾಗಗಳಿಗೆ ಪೆಟ್ಟಾಗಿರುತ್ತದೆ. ಸದರಿ ಕಾರಿನ ನಂಬರ್ ಕಎ-05- ಜಡ್ಜ 751 ಅಗಿದ್ದು ಸದರಿ ಕಾರಿನ ಚಾಲಕ ಯತೀಶ್ ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಜೊತೆ ಸದರಿ ಗಾಯಾಳು ಸಹ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಿನಾಂಕ 17.10.2021 ರಂದು ಬೆಳಗಿನ ಜಾವ 5.15 ರ ಸಮಯದಲ್ಲಿ ಸದರಿ ಗಾಯಾಳು ಮೃತರಾದ ಬಗ್ಗೆ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ, 1 ಮತ್ತು 2ನೇಅ ರೋಪಿತರ ತಪ್ಪಿ ನಿಂದ ಅಪಘಾತ ಅಗಿರುವ ಬಗ್ಗೆ ನಾನು ಪೋಲೀಸರ ಮುಂದೆ ಈಗ ಓದಿ ಹೇಳಲಾದಂತೆ ಹೇಳಿಕೆನೀಡಿರುತ್ತೇನೆ ಎಂದರೆ ಸರಿಯಲ್ಲ, ಸದರಿ ಹೇಳಿಕೆಯನ್ನು ಅಲ್ಲಗಳೆದ ಕಾರಣ ಅದನ್ನು ನಿಪಿ-1 ಎಂದು ಗುರುತಿಸಲಾಯಿತ್ತು ಎಲ್ಲಾ ಗೊತ್ತಿದ್ದರೂ 1ನೇ ಅರೋಪಿಯು ನನ್ನ ಸ್ನೇಹಿತನಾದ ಕಾರಣ ಅವರಿಗೆ ಸಹಾಯ ಮಾಡಲೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃಆರೋಪಿ ಪರ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಮಳವಳ್ಳಿ.